(ಶ್ರೀ ಎಚ್. ಎಸ್. ರುದ್ರಪ್ಪ)

ಪಾರ್ಟಿಗಳಿಗೆ ನೋಟೀಸನ್ನು ಜಾರಿ ಮಾಡಲಾಗಿದೆ ಯೆಂದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರೇ ನನಗೆ ತಿಳಿಸಿರುತ್ತಾರೆ.

ಶ್ರೀ ಎಂ. ಲಿಂಗೇಗೌಡ.—ಆ ಬಿಳಿದಾಳ್ ಫಾರೆಸ್ಟ್‌ಗೆ ಸೇರಿದ್ದ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡಿದ್ದ ರೈತರಿಂದ 300 ರೂಪಾಯಿ ಜುಲ್ಮಾನೆ ತೆಗೆದುಕೊಂಡ ಅನಂತರ ಅವರಿಗೆ ಆ ಜಮೀನಿನಲ್ಲಾದ ಫಸಲನ್ನು ಬಿಟ್ಟು ಕೊಡಲಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆ 300 ರೂಪಾಯಿ ಗಳು ಜುಲ್ಮಾನೆಯಲ್ಲ. ಈಗ ಅವರು ಅಕ್ರಮವಾಗಿ ಫಸಲನ್ನು ತೆಗೆದಿದ್ದಂಥ ಜಮೀನು ಸರ್ಕಾರಕ್ಕೆ ಸೇರಿದ್ದೆಂದು ರುಜುವಾತಾದಲ್ಲಿ ಈಗ ಆ ಬೆಳೆಯನ್ನು ಹಾಗೆಯೇ ಅವರಿಗೆ ಬಿಟ್ಟುಕೊಟ್ಟರೆ ನಾಳೆ ನಮಗೆ ಅವರಿಂದ ಯಾವ ಹಣವೂ ವಸೂಲಾಗಲಾರದೆಂಬ ಕಾರಣದಿಂದ ಆ 300 ರೂಪಾಯಿಗಳನ್ನು ಮುಂಗಡವಾಗಿ ತೆಗೆದು ಕೊಂಡಿದೆ. ನಾಳೆ ಆ ಜಮೀನು ಅವರದೇ ಎಂದು ತೀರ್ಮಾನವಾದರೆ ಆ ಹಣ ಅವರಿಗೆ ಸೇರುತ್ತದೆ. ಇಲ್ಲ ಆ ಜಮೀನು ಸರ್ಕಾರದ್ದೆಂದು ತೀರ್ಮಾನವಾದರೆ ಆ ಹಣ ಸರ್ಕಾರಕ್ಕೆ ಸೇರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಇಲ್ಲಿ ತಿಳಿಸಿರುವ ಅರಣ್ಯಗಳೆಲ್ಲ ಯಾವ ದರ್ಜೆಗೆ ಸೇರಿದವುಗಳು?

ಶ್ರೀ ಎಚ್. ಎಸ್. ರುದ್ರಪ್ಪ.—ಸ್ಟೇಟ್ ಫಾರೆಸ್ಟ್‌ಗಳು.

ಶ್ರೀ ಡಿ. ದೇವರಾಜ ಅರಸ್.—ಆ ವಿಚಾರವನ್ನಲ್ಲ ನಾನೀಗ ಕೇಳುತ್ತಿರುವುದು. ಇವೇನು "ಎವರ್ ಗ್ರೀನ್ ಫಾರೆಸ್ಟ್‌ಗಳೋ" ಅಥವಾ ಇನ್ನಾವ ಬಗೆಯ ಫಾರೆಸ್ಟ್‌ಗಳೋ ಎಂದು?

ಶ್ರೀ ಎಚ್. ಎಸ್. ರುದ್ರಪ್ಪ.—ನಾನು ಎಲ್ಲ ಫಾರೆಸ್ಟ್‌ಗಳನ್ನೂ ಪೂರ್ತಿಯಾಗಿ ನೋಡಿಲ್ಲ. ಕೆಲವು ಬಹಳ ಕಡತರೆ ಆಗಿವೆ. ಆದಾಗ್ಯೂ ಈಗೇನೋ ಅಲ್ಲಿ ಒಳ್ಳೆಯ ಫಾರೆಸ್ಟ್ ಆಗುತ್ತಿದೆ.

Sri H. M. CHANNABASAPPA.—Can the Government tell me in which of these forests are trees which are of shrub type?

Sri H. S. RUDRAPPA.—Generally, in all these State forests there is a good variety of timber.

Sri H. M. CHANNABASAPPA.—In view of the pressure from the people round about will the Government examine the question of releasing the lands to the people?

Sri H. S. RUDRAPPA.—I have taken it for granted that the Hon'ble Member when he was the Minister in charge of "Forest" has examined the whole case in full. If he thinks it has not been considered in full Government will examine it.

ಶ್ರೀ ಎ. ಮುನಿಯಪ್ಪ.—ಆಗಲೇ ಮಾನ್ಯ ಮಂತ್ರಿಗಳು ಅಲ್ಲಿ ಕೆಲವು ಜಮೀನನ್ನು ಹಂಚಲಾಯಿತೆಂದು ಅಪ್ಪಣೆ ಕೊಡಿಸಿದರು. ಹಾಗೆ ಎಷ್ಟು ಎಕರೆ ಜಮೀನನ್ನು ಹಂಚಲಾಯಿತು?

ಶ್ರೀ ಎಚ್. ಎಸ್. ರುದ್ರಪ್ಪ.—ನನಗೆ ಗೊತ್ತಿಲ್ಲ. ಆದರೆ ಒಂದು ಕಡೆ ಮಾತ್ರ 500 ಎಕರೆ ಜಮೀನನ್ನು ರಿಲೀಜ್ ಮಾಡಲಾಗಿದೆ.

ಶ್ರೀ ಎ. ಮುನಿಯಪ್ಪ.—ಹರಿಜನರಿಗೇನಾದರೂ ಅಲ್ಲಿ ಜಮೀನನ್ನು ಕೊಡಲಾಯಿತೇ?

ಶ್ರೀ ಎಚ್. ಎಸ್. ರುದ್ರಪ್ಪ.—ನಾವು ಭೂಮಿಯನ್ನು ರಿಲೀಜ್ ಮಾಡಿ ರೆವಿನ್ಯೂ ಇಲಾಖೆಗೆ ಬಿಟ್ಟು ಕೊಡುವುದೆಷ್ಟೋ ಅಷ್ಟೆ ನಮ್ಮ ಕೆಲಸ.

Sri A. R. BADRI NARAYAN.—What is the total acreage of forest lands in Bilikal Taluk?

Sri H. S. RUDRAPPA.—Notice.

ಶ್ರೀ ಎಸ್. ಕರಿಯಪ್ಪ.—ಈ ಅರ್ಜಿಗಳನ್ನೆಲ್ಲಾ ಕೇವಲ ಒಬ್ಬಿಬ್ಬರು ಮಾತ್ರ ಸೇರಿಕೊಂಡು ಬರೆಸಿ ಇದನ್ನೊಂದು ನಂಪಾದನೆಯ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ. ನಿಜವಾಗಿಯೂ ಜಮೀನು ಬೇಕೆನ್ನುವವರು ಮಾತ್ರ ಅರ್ಜಿ ಹಾಕಿದ್ದಾರೆಂದು ನಾವು ತಿಳಿದುಕೊಂಡಿದ್ದೆವು.

Building Grant for the Board High School at Sullia in South Kanara District.

Q.—193. **Sri K. VENKATARAMANA GOWDA** (Puttur).—

Will the Government be pleased to state :—

(*a*) whether they have received an application by the President, South Kanara District Board, to provide building grant for the Board High School at Sullia ;

(*b*) if so, whether and when the grant will be sanctioned?

A.—**Sri V. VENKATAPPA** (Minister for Education).—

(*a*) Yes.

(*b*) Will be considered on merits.

Sri K. VENKATARAMANA GOWDA.—May I know how long it will take for consideration?

Smt. GRACE TUCKER.—It is being considered. I cannot tell the Hon'ble Member how long it will take.